**<u>ದಿನಾಂಕ 17-09-2022 ರಂದು ಬೆಳಗ್ಗೆ 12.30 ಗಂಟೆಗೆ ವಾರ್ಡ್-88 ರ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು</u>**

ವಾರ್ಡ್ ಸಂಖ್ಯೆ-88 ಜೀವನ್‌ಭೀಮಾನಗರದ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ದಿನಾಂಕ: 03-09-2022 ರಂದು ಬೆಳಿಗ್ಗೆ 12.30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**<u>ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು</u>**

1. ಶ್ರೀ.ಸಾವಿತ್ರಿ –ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-88.
2. ಶ್ರೀಮತಿ ಶಿಲ್ಪಶ್ರೀ – ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ಶ್ರೀನಿವಾಸಲು – ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ.ಹನುಮಂತಪ್ಪ – ಕಿರಿಯ ಘನತ್ಯಾಜ್ಯ ಪರಿವೀಕ್ಷಕರು
5. ಶ್ರೀ.ಲೋಹಿತ್ – ಎಇ, ಬಿಡಬ್ಲ್ಯೂಎಸ್‌ಎಸ್‌ಬಿ
6. ಶ್ರೀಮತಿ.ಪ್ರಭಾ – ಸ.ಅ, ಬೆಸ್ಕಾಂ
7. ಶ್ರೀ.ಮೂರ್ತಿ – ತೆರಿಗೆ ನಿರೀಕ್ಷಕರು
8. ಶ್ರೀ.ಚಂದ್ರಶೇಖರ್ – ತೆರಿಗೆ ನಿರೀಕ್ಷಕರು
9. ಶ್ರೀ.ಚಂದ್ರಶೇಖರ್ – ಯುಎಫ್‌ಡಬ್ಲೂ ವತಿ ಕಂಟ್ರಾಕ್ಟರ್
10. ಶ್ರೀ.ಲಾಲ್ ಸಾಹೇಬ್ – ಮಾರ್ಷಲ್, ಬಿಬಿಎಂಪಿ
11. ಶ್ರೀ.ಚಂದ್ರ – ಸದಸ್ಯರು
12. ಶ್ರೀ.ಪಾಲ್ ಅಮಲ್‌ರಾಜ್ – ಸದಸ್ಯರು
13. ಶ್ರೀ.ಸದಾಶಿವನ್ – ಸದಸ್ಯರು
14. ಶ್ರೀ.ನವೀನ್ – ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀಮತಿ ಶಿಲ್ಪಶ್ರೀ ರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

➢ವಾರ್ಡ್ ನಂ.88 ರಲ್ಲಿ ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ.ಪದ್ಮರವರು ತಿಳಿಸಿದರು. ಇದಕ್ಕೆ ವಾರ್ಡ್ ಸಹಾಯಕ ಅಭಿಯಂತರರು ಮುಂದಿನ ದಿನಗಳಲ್ಲಿ ರಸ್ತೆಯಲ್ಲಿ ವೆಟ್ ಮಿಕ್ಸ್ ಹಾಗೂ ಡಾಂಬರೀಕರಣ ಮಾಡಿ ಗುಂಡಿಗಳನ್ನು ಮುಚ್ಚವ ಕಾರ್ಯವನ್ನು ಮಾಡಲಾಗುವುದು ಎಂದು ತಿಳಿಸಿದರು.

➢Ramaweshwara café ವಾಣಿಜ್ಯ ಪರವಾನಗಿ ರದ್ದು ಪಡಿಸಬೇಕೆಂದು ಶ್ರೀಮತಿ.ದೀಪಾ ನಾಯ್ಕ ರವರು ತಿಳಿಸಿದರು. ಇದಕ್ಕೆ ಸಂಬಂಧಪಟ್ಟ ಆರೋಗ್ಯ ವೈಧ್ಯಾದಿಕಾರಿಗಳು, ಸಿ.ವಿ.ರಾಮನ್‌ನಗರ ರವರಿಗೆ ಉಪ ವಿಭಾಗದಿಂದ ಪತ್ರ ಬರೆಯಲು ನೋಡೆಲ್ ಅದಿಕಾರಿಗಳು ತಿಳಿಸಿದರು.

➢14ನೇ, 19ನೇ ಮುಖ್ಯರಸ್ತೆಯಲ್ಲಿ ಸ್ಯಾನಿಟರಿ ಲೈನ್ ಬದಲಾಯಿಸಬೇಕೆಂದು ಸಬೆಯಲ್ಲಿ ಹಾಜರಿದ್ದ ಶ್ರೀ.ಚಂದ್ರುರವರು ತಿಳಿಸಿದರು. ಇದಕ್ಕೆ ಸಂಬಂಧಪಟ್ಟ ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ರವರು ಸೂಕ್ತ ರೀತಿಯ ಬದಲಾವಣೆಯನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು.

➢ಮಳೆಗಾಲವಾದುದರಿಂದ ಸೊಳ್ಳೆಗಳ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವಾರ್ಡ್‌ನಲ್ಲಿ ಸೊಳ್ಳೆ ಔಷದ ಸಿಂಪಡಿಸಲು ಶ್ರೀಮತಿ.ಚಿತ್ರರವರು ತಿಳಿಸಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಸೊಳ್ಳೆ ಔಷದ ಸಿಂಪಡಿಸಲಾಗುವುದು ಎಂದು ತಿಳಿಸಿದರು.

➢13ನೇ ಮುಖ್ಯರಸ್ತೆಯಲ್ಲಿ ಬಾರಿ ಗಾತ್ರದ ವಾಹನಗಳ ಸಂಚಾರಕ್ಕೆ ನಿರ್ಭಂದ ವಹಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀಮತಿ.ತಾರಾ ರವರು ತಿಳಿಸಿದರು. ಇದಕ್ಕೆ ಸಂಚಾರಿ ವಿಭಾಗದ ಪೊಲೀಸ್‌ರವರಿಗೆ ಪತ್ರ ಬರೆಯಲು ನೋಡೆಲ್ ಅಧಿಕಾರಿಗಳು ತಿಳಿಸಿದರು.

➢ಹೊಸ ವಾರ್ಡ್‌ಗಳ ವಿಂಗಡಣೆಯ ಬಗ್ಗೆ ಮತ್ತು ಹೊಸ ವಾರ್ಡ್‌ನ ರಸ್ತೆಯ ಗಡಿ ಮತ್ತು ಮತದಾರರ ಪಟ್ಟಿ ಪರಿಷ್ಕರಣೆಯನ್ನು ಸಭೆಯಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರು ರವರು ವಿವರಣೆಯನ್ನು ನೀಡಿದರು.

Shilh
ಕಾರ್ಯದರ್ಶಿಗಳು
ವಾರ್ಡ್ ಸಮಿತಿ-88

21/9/22
ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 88
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 88